ಇನ್ನೇನಿದೆ ಊರಲ್ಲಿ– ಹಾಳು ಸುರಿಯುತ್ತಿರುವ ಮನೆ ಬಿಟ್ಟು, ಬಾಯಿ ಬಿಟ್ಟು ನಾಶವಾಗಿರುವ ಹೊಲ ಬಿಟ್ಟು.

★★★

ಬರೀ ಪಾಠ, ಲೈಬ್ರರಿ, ಕಾಲೇಜು–

ಹುಚ್ಚು ಹಿಡಿದವನಂತೆ. ಕಾಲಕ್ಕೆ ನಿವಾರಿಸುವ ಗುಣ ಇದೆ ಎಂಬ ಭ್ರಮೆಯಿಂದ. ಮೂರನೇ ವರ್ಷದ ಮಧ್ಯ ಭಾಗ. ನವರಾತ್ರಿ ರಜೆ ಕಳೆದಿತ್ತು ಅಷ್ಟೇ.

ಕುಕ್ಕರಹಳ್ಳಿಯ ಕೆರೆಯ ಎದುರಿನ ಕಲ್ಲು ಬೆಂಚಿನ ಮೇಲೆ ಕುಳಿತಿದ್ದೇನೆ. ನೀರು ತುಂಬಿತ್ತು ಕೆರೆಯಲ್ಲಿ. ಸಣ್ಣ ತೆರೆಗಳು. ಒಂದೆರೆಡು ಕೊಕ್ಕರೆಗಳು... ಹಿಂಬದಿಯ ರಸ್ತೆಯಲ್ಲಿ ಕೆಲವು ಬಸ್ಸುಗಳ ಓಡಾಟ. ಅಷ್ಟೇ.

ಆಗ, ಇಂಥಾ ಒಂದು ದಿನ...

ನನ್ನನ್ನು ನೋಡಿಯೂ, ನೋಡದಂತೆ... ಸ್ವಲ್ಪ ಮುಖ ಮರೆಸಿಕೊಂಡು ಹೋದಂತೆ ಒಂದು ಹೆಂಗಸು ಹೋದಂತಾಯಿತು. ಆಕೆಯ ಕೈಯಲ್ಲಿ ಒಂದು ಮಗು ಇತ್ತು. ಹಿಂಬದಿಯಿಂದ ಕಾಣಿಸಿತು. ಅವಳೇನಾ, ಅವಳೇನಾ.

ಬಿರ ಬಿರನೆ ಕಾಲು ಹಾಕಿದೆ. ಅವಳನ್ನು ದಾಟಿಹೋದೆ. ಅದನ್ನು ಅವಳು ನಿರೀಕ್ಷಿಸಿರಲಿಲ್ಲವೇನೋ. ತಿರುಗಿ ನೋಡಿದೆ–

ದೀಪಾಲಿ.

ಮೈಯಲ್ಲಿ ವಿದ್ಯುತ್ ಸಂಚಾರ. ಇನ್ನೆಂದೂ ಇವಳನ್ನು ನೋಡಲಾಗುವುದಿಲ್ಲ ಎಂದವನಿಗೆ, ನನ್ನೆದುರೇ ನಿಂತಿದ್ದಾಳೆ.

ನನ್ನನ್ನು ನೋಡಿ ನಕ್ಕಳು. 'ನಮಸ್ಕಾರ ಸಾರ್' ಎಂದಳು. ಈಗ ಈಕೆ ತಪ್ಪಿಸಿಕೊಂಡು ಹೋಗಲಾರದೆ ಸಂಪರ್ಕ ಸಿಕ್ಕಿ ಬಿಟ್ಟಿತ್ತು. ನಂತರ–

ಕುಳಿತು ಮಾತನಾಡಿದೆವು, ನಿಂತು ಮಾತನಾಡಿದವು.

ಅವರ ಮನೆ ದೂರವಿರಲಿಲ್ಲ. ಸರಸ್ವತಿಪುರಂ ಹನ್ನೊಂದನೇ ಕ್ರಾಸು. ಅವಳ ತಂದೆತಾಯಿಯ ಸಮ್ಮುಖದಲ್ಲಿ ಮಾತನಾಡಿದೆವು. ಇದೇನು ತಕ್ಷಣದ ನಿರ್ಧಾರ ಅಲ್ಲ. ಕೊನೆಗೆ ನಾನೇ ಕೇಳಿದೆ– 'ಇನ್ನೂ ನನಗೆ ಸ್ವಲ್ಪ ಜಾಗವಿದೆಯೇ ನಿಮ್ಮ ಜೀವನದಲ್ಲಿ?' ಆಕೆ ಬೆಚ್ಚಲಿಲ್ಲ. ಬಿಚ್ಚಿ ಎಲ್ಲಾ ಹೇಳಿದಳು. ಆಕೆಗೆ ಗಂಡು ಮಗು ಇದ್ದದ್ದು, ಗಂಡ ಬೆಹರಾನ್‌ನಲ್ಲಿ ಗೊತ್ತೇ ಆಗದ ಕಾಯಿಲೆಯಿಂದ ವಿಶ್ವ ಪ್ರಯತ್ನ ಮಾಡಿದರೂ ನಿಧನನಾಗಿದ್ದು... 'ನಾನು ಎಲ್ಲವನ್ನು ಮರೆತು ಬಿಡಿ. ನಿಮ್ಮ ಮಗುವಿಗೆ ನಾನೇ ತಂದೆ. 'ಒಪ್ಪಿಗೆಯಾ' ಎಂದೆ. ಆಕೆಯೂ ಒಪ್ಪಿದಳು.

ಅವಳ ತಂದೆತಾಯಿ ಕಣ್ಣಲ್ಲಿ ನೀರು– 'ನಾನು ವಿಶಾಲ ಹೃದಯದ ಮನುಷ್ಯ' ಎಂದು ಕಣ್ಣು ತುಂಬಿ ಕೊಂಡರು.

★★★

ಇನ್ನು ಮೂರು ದಿನಕ್ಕೆ ಮದುವೆ. ತುಂಬಾ ಜನರಿಗೆ ಹೇಳಿಕೆ ಬೇಡ ಎಂದು ತೀರ್ಮಾನವಾಗಿತ್ತು. ಎಲ್ಲಾ ಕೆಲಸ ಶುರುವಾಗಬೇಕು. ಬಟ್ಟೆ ಸಿದ್ಧವಾಯಿತು. ನನಗಂತೂ ಹೇಳೋರು ಕೇಳೋರು ಇಲ್ಲ. ಅವರು ಸಿದ್ಧವಾಗುತ್ತಿರಬಹುದು. ನಾನು ಆಕೆಗೊಂದು ರೇಷ್ಮೆ ಸೀರೆ ಕೊಂಡೆ...

ಇನ್ನು ಎರಡು ದಿನ.

ಇನ್ನು ಒಂದೇ ದಿನ.

ಆದಿನ ಬೆಳಿಗ್ಗೆ ಸ್ಟಾಫ್ ರೂಮಿನಲ್ಲಿ ಕುಳಿತಿದ್ದೆ ನಾಳೆಯ ಬಗ್ಗೆ ಯೋಚಿಸುತ್ತಾ. ಅಟೆಂಡರ್